ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – NOV/DEC 2025

## KANNADA – I SEMESTER BSC (F+R)

## 24BSC11K: ವಿಜ್ಞಾನ ಕನ್ನಡ 1

**Time: 3 Hours** **Max. Marks: 80**

**I. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ)** 3x10=30

1. ಒಂಟಿ ಹುಳುಗಳು ಬೀಡಾ ಕಟ್ಟುವ ವಿಧಾನ ಮತ್ತು ಅದರ ಉದ್ದೇಶವನ್ನು ವಿಶ್ಲೇಷಿಸಿ.
2. ಪಾಹಾಂನ ಬದುಕಿನ ದುರಂತಕ್ಕೆ ಕಾರಣ ವಿಧಿಯಾಟವೇ ಅಥವಾ ಅವನ ದುರಾಸೆಯೇ? ಚರ್ಚಿಸಿ.
3. ಪ್ರಾಚೀನ ತಮಿಳು ಸಂಗಂ ಸಾಹಿತ್ಯದ ವೈಶಿಷ್ಟ್ಯ ಹಾಗೂ ಕನ್ನಡದ ಜೊತೆಗಿನ ಅದರ ಸಂಬಂಧವನ್ನು ವಿವರಿಸಿ.
4. ನಾಗರಿಕತೆ ಬೆಳೆದಂತೆಲ್ಲ ಸಾಮಾಜಿಕ ಸಮಸ್ಯೆಗಳು ಮನುಷ್ಯ ಕುಲವನ್ನು ಬಾಧಿಸುತ್ತಿವೆ' –ಈ ಹೇಳಿಕೆಯನ್ನು ಪರಾಮರ್ಶಿಸಿ.

**II. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ತಮ್ಮ ಗೆಳೆಯನ ಜೊತೆ ಬೀಡಾ ಬಿಚ್ಚಿದ ಸಂದರ್ಭವನ್ನು ಬರೆಯಿರಿ.
2. ಕುವೆಂಪುರವರು ಕನ್ನಡಿಗರಿಗೆ ಯಾವ ರೀತಿಯ ದೀಕ್ಷೆ ಕೊಡುತ್ತಾರೆ?
3. ಕುಮಾರವ್ಯಾಸ ಕವಿಯ ಪರಿಚಯ ಮಾಡಿಕೊಡಿ.
4. ಸಂಧಿ ಮಾಡಿಕೊಂಡರೆ ಭೀಮನು ಹಂಗಿಸುತ್ತಾನೆ ಎಂದು ದುರ್ಯೋಧನನು ಹೇಳಲು ಕಾರಣವೇನು?
5. ವಿಜ್ಞಾನ ಕ್ಷೇತ್ರಕ್ಕೆ ಗೆಲಿಲಿಯೋ ಮತ್ತು ಮೇರಿಕ್ಯೂರಿಯವರ ಕೊಡುಗೆಗಳೇನು? ಪರಾಮರ್ಶಿಸಿ.
6. ಇಂಗ್ಲಿಷಿನ ತತ್ಸಮ ತದ್ಭವಗಳಲ್ಲಿ ಯಾವ ರೀತಿಯ ಪ್ರವೃತ್ತಿಗಳು ಕಂಡುಬರುತ್ತವೆ? ವಿವರಿಸಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿರಿ.** 1x5=5

ಕುದುರೆಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ಶಕ್ತಿ ಪಡೆದು ದುಡಿಮೆಗೆ ಉಪಯೋಗಿಸುತ್ತಾ ಇರುವ ನಮ್ಮ ಅಸಂಖ್ಯಾ ದುಡಿಮೆಗಾರರು ಪರಾಗಸ್ಪರ್ಷಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ಬಂದು ತನ್ನನ್ನು ಮುಟ್ಟಿತೆನ್ನುವ ಭರವಸೆಯಲ್ಲಿ ಗಾಳಿಯಲ್ಲಿ ಇರುವ ಹೂವಿನ ಹಾಗೆ ಇದ್ದುಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮಿಯುತ್ತಾ, ಕಾಲ್ನಡಿಗೆಯಲ್ಲಿ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದುದ್ದರ ಭರವಸೆಯ ಈ ಜೀವನದಲ್ಲಿ ಭಾರತದ

ಅಪಾರ ಜನಸಂಖ್ಯೆಗೆ ನಿಜವಾಗಿ ಸಿಗುವುದು ಮಕ್ಕಳ ಲಾಲನೆ, ಪಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ.

ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಎನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯಿ ಸ್ವರೂಪವನ್ನು ಮತ್ತು ಅದರ ಸಂಚಾರಿ ಕನಸುಗಳನ್ನು, ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕಿ, ಮುದುಕ ಅಥವಾ ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** **2x1=2**

**V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.** **2x2=4**

1. ದುರಾಸೆ 2. ಬಹಿರಂಗ
3. ಸಂವಿಧಾನ 4. ತಿಳುವಳಿಕೆ

**VI. ವರ್ಗಾವಣೆ ಪತ್ರ ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ.** **1x5=5**

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x1=4**

1. ಹರಕೆ 2. ಬೆರಗು 3. ಅನಲ
4. ಇಳೆ 5. ಕುನ್ನಿ 6. ಶಂಕೆ

**VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **5x1=5**

1. "ದಿನಪಸುತ" ಎನ್ನುವುದು ಯಾರ ಹೆಸರು?

   ಎ. ಕರ್ಣ ಬಿ. ಅರ್ಜುನ ಸಿ. ಬೀಮ ಡಿ. ನಕುಲ

2. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?

   ಎ. ಚನ್ನಮಲ್ಲಿಕಾರ್ಜುನ ಬಿ. ಕೂಡಲಸಂಗಮದೇವ ಸಿ. ರಾಮನಾಥ ಡಿ. ಗುಹೇಶ್ವರ

3. "ಗಾಥಾಸಪ್ತಸತಿ" ಕೃತಿ ಬರೆದವರು ಯಾರು?

   ಎ. ಹಾಲರಾಜ ಬಿ. ಕುವೆಂಪು ಸಿ. ಬೇಂದ್ರೆ ಡಿ. ಸಿದ್ದಲಿಂಗಯ್ಯ

4. "ಇಸಿಲ" ಪದ ಯಾವ ಕಲ್ಬರಹದಲ್ಲಿ ಇದೆ?

   ಎ. ಹಲ್ಮಡಿ ಬಿ. ಬಾದಾಮಿ ಸಿ. ಶ್ರವಣಬೆಳಗೊಳ ಡಿ. ಬ್ರಹ್ಮಗಿರಿ

5. "ಮಜ್ಜನ" ಎಂದರೆ ........

   ಎ. ತೀರ್ಥ ಬಿ. ಸ್ನಾನ ಸಿ. ಸಂಗಮ ಡಿ. ಪವಿತ್ರ

*******

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU